**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:DCE/TRN/TRAN/5/2022/TDG

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:19-03-2022.

# ಸುತ್ತೋಲೆ

ವಿಷಯ: ಇಎಂಐಎಸ್ ತಂತ್ರಾಂಶದಲ್ಲಿ ಅಗತ್ಯ ಮಾಹಿತಿಗಳನ್ನು ದಾಖಲಿಸುವ ಬಗ್ಗೆ.

*******

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಬೋಧಕ/ಬೋಧಕೇತರ ಸಿಬ್ಬಂದಿಗಳ ಸೇವಾ ವಿವರಗಳನ್ನು **EMIS ತಂತ್ರಾಶದಲ್ಲಿ** ಅಪ್‌ಲೋಡ್ ಮಾಡದಿರುವುದು ಹಾಗೂ ಅಪೂರ್ಣ ಮಾಹಿತಿಗಳನ್ನು ಅಪ್‌ಲೋಡ್ ಮಾಡಿರುವುದನ್ನು ಗಮನಿಸಲಾಗಿದೆ. **EMIS ತಂತ್ರಾಶದಲ್ಲಿ** ಅಪ್‌ಲೋಡ್ ಮಾಡಲಾಗುವ ಸೇವಾ ವಿವರಗಳನ್ನು ಆಧರಿಸಿ **ವರ್ಗಾವಣೆ ಮತ್ತು ಹುದ್ದೆಸ್ಥಳಾಂತರ** ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದರಿಂದ ಈ ಕೆಳಕಂಡ ಅಂಶಗಳ ಬಗ್ಗೆ ವೈಯಕ್ತಿಕ ಗಮನಹರಿಸಿ ಮಾಹಿತಿಯನ್ನು ನಿಖರವಾಗಿ **ದಿನಾಂಕ:23-03-2022ರ ಒಳಗಾಗಿ ಕಡ್ಡಾಯವಾಗಿ EMIS ತಂತ್ರಾಶದಲ್ಲಿ** ಅಪ್‌ಲೋಡ್ ಮಾಡಲು ಹಾಗೂ ಈಗಾಗಲೇ ಅಪ್‌ಲೋಡ್ ಮಾಡಲಾಗಿರುವ ಮಾಹಿತಿಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

- ಕಾಲೇಜಿನಲ್ಲಿ ಲೀನ್ ಹೊಂದಿರುವ ಹಾಗೂ ವೇತನ ಪಡೆಯುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಕಡ್ಡಾಯವಾಗಿ ತಪ್ಪಿಲ್ಲದಂತೆ ನಮೂದಿಸುವುದು.

- ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರ ಜನ್ಮ ದಿನಾಂಕ, ನೇಮಕಾತಿ ಹೊಂದಿದ ದಿನಾಂಕ ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ (ಲೀನ್ ಹೊಂದಿದ) ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕವನ್ನು **(dd-mm-yyyy)**ತಪ್ಪಿಲ್ಲದಂತೆ ಕಡ್ಡಾಯವಾಗಿ ನಮೂದಿಸುವುದು.

- ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಹಿಂದೆ ಕಾರ್ಯನಿರ್ವಹಿಸಿದ ಕಾಲೇಜು/ ಕಛೇರಿಗಳ ವಿವರ ಮತ್ತು ದಿನಾಂಕವನ್ನು **(dd-mm-yyyy)** ತಪ್ಪಿಲ್ಲದಂತೆ ಕಡ್ಡಾಯವಾಗಿ ನಮೂದಿಸುವುದು. (Service History)

- ವಯೋ/ಸ್ವಇಚ್ಛಾನಿವೃತ್ತಿ/ರಾಜೀನಾಮೆ/ಅನ್ಯ ಇಲಾಖೆಗಳಿಗೆ ನೇಮಕಾತಿ ಹೊಂದಿದ/ವಜಾ/ ಮರಣ ಇತ್ಯಾದಿ ಕಾರಣಗಳಿಂದ ಸರ್ಕಾರಿ/ಇಲಾಖಾ ಸೇವೆಯಿಂದ ಬಿಡುಗಡೆ ಮಾಡಲಾದ/ ತೆಗೆದುಹಾಕಲ್ಪಟ್ಟ ನೌಕರರ ಮಾಹಿತಿಯನ್ನು ತಕ್ಷಣ **EMIS**ನಿಂದ ಕಡ್ಡಾಯವಾಗಿ ತೆಗೆದು ಹಾಕುವುದು **(Delete)**.

- ಸೇವಾ ಹಿರಿತನದ ಆಧಾರದ ಮೇಲೆ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು **Principal Incharge** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

- ಅನುದಾನಿತ ಖಾಸಗಿ ಕಾಲೇಜಿನಿಂದ ಮರುಹಂಚಿಕೆ ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳ ವಿವರಗಳನ್ನು ಇ.ಎಂ.ಐ.ಎಸ್.ನಲ್ಲಿ **Re-deployed from Private Aided College** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

--2

ನಿಯೋಜನೆ ಹೊಂದಿದ ಬೋಧಕರನ್ನು ಮಾತ್ರ (ವೇತನ ಪಡೆಯುತ್ತಿರುವ) ಮತ್ತು ನಿಯೋಜಿತ ಕಾಲೇಜು (ಎರಡೂ ಕಾಲೇಜುಗಳ) ಇ.ಎಂ.ಐ.ಎಸ್ ನಲ್ಲಿ Regular ಎಂದು ನಮೂದಿಸಿರುವುದು ಹಾಗೂ ಮಾತ್ರ ಕಾಲೇಜಿನ ಇ.ಎಂ.ಐ.ಎಸ್ ನಿಂದ ತೆಗೆದು, ನಿಯೋಜಿತ ಕಾಲೇಜಿನಲ್ಲಿ Regular ಎಂದು ನಮೂದು ಮಾಡಿರುವ ಪ್ರಕರಣಗಳನ್ನು ಗಮನಿಸಲಾಗಿದೆ. **ಕೂಡಲೇ ನಿಯೋಜಿತ ಕಾಲೇಜಿನಲ್ಲಿ ಸದರಿ ನಮೂದುಗಳನ್ನು ತೆಗೆದು ಹಾಕಿ (Delete), ಮಾತ್ರ ಕಾಲೇಜಿನಲ್ಲಿಯೇ (ವೇತನ ಪಡೆಯುತ್ತಿರುವ) ನಮೂದು ಮಾಡುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ಅಂತಹ ನಿಯೋಜನೆಗಳನ್ನು ರದ್ದುಪಡಿಸಲಾಗುವುದು.**

ಅಪ್‌ಲೋಡ್ ಮಾಡಿರುವ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಅಸಂಗತ ಮಾಹಿತಿಗಳನ್ನು ಇ.ಎಂ.ಐ.ಎಸ್.ನಲ್ಲಿ **Upload** ಮಾಡಿದಲ್ಲಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು/ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

19/03/2022

**ಮುಖ್ಯ ಆಡಳಿತಾಧಿಕಾರಿಗಳು**
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಭಾರ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಮ್ಯಾನೇಜರ್/ಅಧೀಕ್ಷಕರು, ಸೇವಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.